



## ಫ್ಯಾಷನ್ ಸೆನ್ಸ್

ಇಂದಿನ ಪೀಳಿಗೆಯವರಿಗೆ ಫ್ಯಾಷನ್ ಸೆನ್ಸ್ ತುಂಬಾ ಚೆನ್ನಾಗಿದೆ. ತಾವು ಧರಿಸುವ ದಿರಿಸು ಹೀಗೇ ಇರಬೇಕು ಅನ್ನುವ ಸ್ಪಷ್ಟತೆಯೂ ಅವರಲ್ಲಿದೆ. ಅವರಿಗೆ ಸಾಂಪ್ರದಾಯಿಕ ಉಡುಗೆಗಳೆಂದರೆ ಬಲು ಇಷ್ಟ. ಸಾಂಪ್ರದಾಯಿಕ ದಿರಿಸುಗಳಿಗೆ ಪಾಶ್ಚಿಮಾತ್ಯ ಟಚ್ ಕೊಟ್ಟು ಧರಿಸುವುದರಲ್ಲಿ ಅವರು ಸಿದ್ಧಹಸ್ತರು. ಹೀಗಾಗಿಯೇ ಕಾಂಜೀವರಂ, ಧರ್ಮಾವರಂ, ಕಲಂಕಾರಿ, ಪಟೋಲಾ, ಇಕ್ಕತ್, ಪೈಠಣಿ ಮುಂತಾದ ಭಾರತೀಯ ಶೈಲಿಯ ಫ್ಯಾಬ್ರಿಕ್‌ಗಳಿಗೆ ಹೆಚ್ಚು ಪ್ರಾಧಾನ್ಯತೆ ದಕ್ಕುತ್ತಿದೆ. ಟ್ರೆಡಿಷನಲ್ ಸ್ಕರ್ಟ್ ಜೊತೆಗೆ ಚೆಂದದ ಟೀ ಶರ್ಟ್ ಧರಿಸುವುದೋ ಅಥವಾ ಸೀರೆಗಳಿಗೆ ಧೋತಿಯ ಲುಕ್ ಕೊಟ್ಟು ಅದರೊಂದಿಗೆ ಕುರ್ತಾ ಹಾಕುವುದು, ವಿಭಿನ್ನ ಶೈಲಿಯ ಸಾರಿ ಡ್ರೇಪಿಂಗ್ ಮಾಡಿಕೊಳ್ಳುವುದು ಹೆಚ್ಚಾಗುತ್ತಿದೆ. ರೆಡಿಮೇಡ್ ಸೀರೆ ಕೂಡ ಟ್ರೆಂಡ್. ಸೀರೆಯಲ್ಲಿ ಪ್ಯಾಂಟ್ ಹೊಲಿಸಿಕೊಳ್ಳುತ್ತಾರೆ. ಅದಕ್ಕೆ ತಕ್ಕಂತ ವೆಸ್ಟರ್ನ್ ಟಾಪ್ ಧರಿಸುತ್ತಾರೆ. ಒಟ್ಟಿನಲ್ಲಿ 'ಸಾರಿ ಅಪ್‌ಸೈಕ್ಲಿಂಗ್' ಬಗ್ಗೆ ಜನರು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ.

— ರಶ್ಮಿ ಅನೂಪ್ ರಾವ್, ಸೆಲೆಬ್ರಿಟಿ ವಸ್ತ್ರ ವಿನ್ಯಾಸಕಿ

ದಿರಿಸುಗಳನ್ನು ತಯಾರಿಸಲಾಗುತ್ತಿದೆ. ಹಬ್ಬದ ಸಂದರ್ಭದಲ್ಲಿ ಸಾಂಪ್ರದಾಯಿಕ ದಿರಿಸುಗಳಿಗೇ ಹೆಚ್ಚು ಪ್ರಾಶಸ್ತ್ಯವಿದ್ದರೂ ಅದಕ್ಕೊಂದು ವೆಸ್ಟರ್ನ್ ಲುಕ್ ಕೊಡುವುದು ಇಂದಿನವರ ಫ್ಯಾಷನ್ ಸೆನ್ಸ್‌ಗೆ ಹಿಡಿದ ಕೈಗನ್ನಡಿ. ಸೀರೆ ಹೇಗೇ ಇರಲಿ ಹೆವಿ ಡಿಸೈನರ್ ಬ್ಲೌಸ್‌ಗಳನ್ನು ತೊಡಲು ಮಹಿಳಾ ಮಣಿಯರು ಹೆಚ್ಚು ಇಷ್ಟಪಡುತ್ತಿದ್ದಾರೆ.

ಯುಗಾದಿ ಹೊಸ ವರ್ಷದ ಹಬ್ಬ. ಇದು ಬರುವುದೇ ಬೇಸಿಗೆ ಕಾಲದಲ್ಲಿ. ಹೀಗಾಗಿ, ಎಷ್ಟೇ ಫ್ಯಾಷನ್ ಪ್ರಿಯರಾಗಿದ್ದರೂ ಆರಾಮದಾಯಕ, ಮೃದು ಫ್ಯಾಬ್ರಿಕ್‌ಗಳಿಗೆ, ದಿನವಿಡೀ ಧರಿಸಿದರೂ ಇರಿಸು ಮುರುಸಾಗದಂಥ ಕಾಟನ್ ಬ್ಲೆಂಡ್, ಸಿಲ್ಕ್ ಬ್ಲೆಂಡ್, ಹಗುರವಾದ, ತಂಪು ಅನುಭವ ನೀಡುವ ಬಟ್ಟೆಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದಾರೆ. ಅಂಥವರಿಗೆ ಪರಸರ ಸ್ನೇಹಿ ಬಟ್ಟೆಗಳಾದ ಖಾದಿ ಕುರ್ತಾ, ಅನಾರ್ಕಲಿಗಳು ಸ್ವಾಭಾವಿಕ ಬಣ್ಣಗಳನ್ನುನ ಬಳಸಿ ತಯಾರಿಸಿದ ಉಡುಪುಗಳು ಹೇಳಿ ಮಾಡಿಸಿದಂತಿವೆ.

## ಮಕ್ಕಳು ಮಿಂಚಿಂಗ್

ತಾಯಂದಿರಿಗೆ ತಮ್ಮ ಮಕ್ಕಳು ಹೀಗೇ ತಯಾರಾಗಬೇಕು ಎಂದು ಬಯಕೆ ಇರುತ್ತದೆ. ಹೀಗಾಗಿ, ಒಂದು ವರ್ಷದ ಹಸುಗೂಸಿನಿಂದ ಹಿಡಿದು ಎಲ್ಲರಿಗೂ ಹಬ್ಬದ ಸಂದರ್ಭದಲ್ಲಿ ಸಾಂಪ್ರದಾಯಿಕ ದಿರಿಸುಗಳನ್ನೇ ಹಾಕುತ್ತಾರೆ. ಹೊಸ ಬಟ್ಟೆಗಳನ್ನು ಕೊಂಡು ಮಗುವಿಗೇ ಬೇಕಾದಂತೆ ಹೊಲಿಸುವುದು ಒಂದು ರೀತಿಯ ಟ್ರೆಂಡ್ ಆದರೆ ತಾಯಿಯದ್ದೋ, ಅಜ್ಜಿಯದ್ದೋ, ತಮ್ಮದೋ ಹಳೆಯ ರೇಷ್ಮೆ ಸೀರೆಗಳನ್ನು ಬಳಸಿ ಚೆಂದದ ಲಂಗ ಬ್ಲೌಸ್ ತಯಾರಿಸುವುದು ಇನ್ನೊಂದು ಟ್ರೆಂಡ್, ಟ್ವಿನ್ನಿಂಗ್ ಮಾಡಿಕೊಳ್ಳುವುದೂ ಅವರಿಗೆ ತುಂಬಾ ಇಷ್ಟ.

ಫ್ಯಾಷನ್ ಡಿಸೈನರ್ ಆಗಿರುವ ರಶ್ಮಿ ಅವರ ಪ್ರಕಾರ, ವಿದೇಶದಲ್ಲಿರುವ ಭಾರತೀಯರು ಕೂಡ ತಮ್ಮ ಬೇರು ಮರೆಯಬಾರದು ಎನ್ನುವ ಕಾರಣಕ್ಕೆ ಸಾಂಪ್ರದಾಯಿಕ ದಿರಿಸುಗಳಿಗೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಹಬ್ಬಗಳಲ್ಲಿ ಮಕ್ಕಳಿಗೆ ಭಾರತೀಯ ಉಡುಗೆ ತೊಡಿಸಿ ಹೆಚ್ಚು ಖುಷಿಪಡುತ್ತಾರೆ. 'ವಿದೇಶದಲ್ಲಿ ಅನೇಕರು ನನ್ನ ಗ್ರಾಹಕರು ಇದ್ದಾರೆ. ಒಟ್ಟಿಗೆ ಐದಾರು ಜೊತೆ ಸಾಂಪ್ರದಾಯಿಕ ದಿರಿಸುಗಳನ್ನು ಹೊಲಿಸಿಕೊಂಡು ಹೋಗುತ್ತಾರೆ. ಅವುಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ವಿಭಿನ್ನವಾಗಿ ತೊಟ್ಟುಕೊಳ್ಳುತ್ತಾರೆ. ಒಮ್ಮೆ ಲಂಗ ಬ್ಲೌಸ್, ಇನ್ನೊಮ್ಮೆ ಲಂಗ ದಾವಣಿ, ಕೆಲವೊಮ್ಮೆ ಅದೇ ಸ್ಕರ್ಟ್‌ಗೆ ಟೀ ಶರ್ಟ್ ಧರಿಸುತ್ತಾರೆ. ಬೇರೆ ಸೀರೆಯೊಂದಿಗೆ ಮಿಸ್ ಮ್ಯಾಚ್ ಮಾಡಿಕೊಳ್ಳುತ್ತಾರೆ' ಎಂದು ವಿವರಿಸುತ್ತಾರೆ.



## ಕೊ ಆರ್ಡ್ ಸೆಟ್ಸ್

ಹಬ್ಬದ ಓಡಾಟದ ನಡುವೆ ಆರಾಮವಾಗಿರಲು ಎಥ್ನಿಕ್ ಪ್ರಿಂಟ್ ಇರುವ ಕೊ ಆರ್ಡ್ ಸೆಟ್‌ಗಳು ಹೇಳಿ ಮಾಡಿಸಿದ ಆಯ್ಕೆಯಾಗಿದೆ. ಸಿಲ್ಕ್ ಸ್ಕರ್ಟ್ ಜೊತೆಗೆ ಲಾಂಗ್ ಕುರ್ತಾಗಳು ಮಾರುಕಟ್ಟೆಯಲ್ಲಿ ಹೆಚ್ಚೆಚ್ಚು ಮಿಂಚುತ್ತಿವೆ.

## ಚೆಲುವು ಹೆಚ್ಚಿಸುವ ಆಭರಣ

ಹಬ್ಬಗಳ ಅಪ್ಪಟ ಚೆಲುವು ಇರುವುದೇ ದಿರಿಸಿನೊಂದಿಗೆ ನೀವು ಹೇಗೆ ಅಲಂಕಾರಗೊಂಡಿದ್ದೀರಿ ಅನ್ನುವುದರ ಮೇಲೆ. ಸರಳಾತಿ ಸರಳ ದಿರಿಸು ಕೂಡ ನೀವು ಧರಿಸುವ ಆಭರಣವನ್ನಾಧರಿಸಿ ಹೆಚ್ಚು ಆಕರ್ಷಕವಾಗಿ ಕಾಣಿಸಬಲ್ಲವು. ದಿರಿಸು ಅಪ್ಪಟ ಸಾಂಪ್ರದಾಯಿಕವೇ, ಇಂಡೋ ವೆಸ್ಟರ್ನ್ ಫ್ಯೂಷನ್ನಾ ಅನ್ನುವುದರ ಮೇಲೆ ಆಭರಣಗಳನ್ನು ಧರಿಸಿ. ಉಡುಪಿಗೆ ತಕ್ಕಂತ ಮ್ಯಾಚಿಂಗ್ ಬಳೆಗಳು, ನೆಕ್ಲೇಸ್, ಕಿವಿಯೋಲೆ ಧರಿಸುವುದರೊಂದಿಗೆ ನಿಮ್ಮ ಕೇಶವಿನ್ಯಾಸಕ್ಕೆ ಮಲ್ಲಿಗೆ ಹೂವಿನ ಅಲಂಕಾರವೂ ಇರಲಿ. ಹಬ್ಬಕ್ಕೆ ಗಾಢ ಮೇಕಪ್ ಬೇಡ.

## ಕೆಲವೊಂದು ಟಿಪ್ಸ್

- ರೇಷ್ಮೆ ಉಡುಪು ಧರಿಸುವಾಗ ದೇಹಕ್ಕೆ ಫಿಟ್ ಆಗುವಂಥ ಡ್ರೆಸ್ ಅನ್ನೇ ತೊಟ್ಟುಕೊಳ್ಳಿ.
- ಇತರ ಫ್ಯಾಬ್ರಿಕ್‌ನಿಂದ ತಯಾರಿಸಿದ ಉಡುಗೆಗಳೂ ದೇಹಕ್ಕೆ, ತ್ವಚೆಗೆ ಹಿತವಾಗುವಂತಿರಲಿ.
- ಚಮ್ಕಿ, ಮಣಿ, ಕಲರ್ ಬೀಡ್ಸ್ ಇರುವ ಉಡುಪು ಗ್ರ್ಯಾಂಡ್ ಲುಕ್ ಕೊಡುತ್ತದೆ.